ತಾಯಿಗೆ ಸಂಬಂಧಿಸಿದ ಬಹಳಷ್ಟು ವಿಷಯಗಳನ್ನು ತನಗಲ್ಲಿ ತಿಳಿದುಕೊಳ್ಳುವಂತಾದದ್ದು.

ನಿನ್ನೆ ರಾತ್ರಿಯಂತೂ ಬಿದ್ದ ಕನಸು ಬಹಳ ಭಯಾನಕವಾಗಿತ್ತು. ಮಸುಕು ಬೆಳದಿಂಗಳಿನಲ್ಲಿ ನೆಲಕ್ಕಪಳಿಸಿದ ತಾಯಿ, ರಕ್ತವನ್ನು ಸೋಸಿಕೊಳ್ಳುತ್ತಿರುವ ಕೆಂಪು ಹುಣ್ಣಿಮೆಯ ಚಂದ್ರ, ಕಣ್ಮುಂದೆಯೇ ಕರಗಿ ಹೋದ ಪ್ರೇಮಿ ಹೇಮಂತ....

ಏನು ಈ ಕನಸಿನ ಅರ್ಥ....ತಾಯಿಗೆ ಅಪಾಯವಾಗಿರುವಂತೆ ಹೇಮಂತನೂ ಅಪಾಯದಲ್ಲಿ ಸಿಲುಕಿಕೊಂಡಿರಬಹುದೇ?....ಅವನನ್ನು ಮುಗಿಸುವ ಸಂಚು ಈ ಕೋಟೆ ಬಂಗಲೆಯಲ್ಲಿ ನಡೆಯುತ್ತಿರಬಹುದೇ? ಆ ಯೋಚನೆ ಬಂದಿದ್ದೇ ಹೃದಯ ಅವಳಿಗೇ ಕೇಳುವಷ್ಟು ಜೋರಾಗಿ ಹೊಡೆದುಕೊಳ್ಳತೊಡಗಿತು. ಹಾಗಾಗದಿರಲಿ, ತನ್ನ ಹೇಮಂತನಿಗೆ ಯಾವ ಅಪಾಯವೂ ಬಾರದಿರಲಿ ಎಂದು ಅವಳ ಮನಸ್ಸು ಒಳಿತನ್ನೇ ಹಾರೈಸಿತು.

ಆದರೂ ಕಳೆದ 20 ವರ್ಷಗಳಿಂದ ತನ್ನ ತಾಯಿ ಹೇಮಲತಾಳ ಬಗ್ಗೆ ತನಗೆ ಆಕ್ರೋಶವಿದ್ದುದಂತೂ ಹೌದಲ್ಲ. ಆದರೆ ತನ್ನ ಮನಸ್ಸು ಅದು ಹೇಗೆ ಈಗ ಇರುವ ಸ್ಥಿತಿಯನ್ನೇ ಕಲ್ಪಿಸಿಕೊಂಡು ತಾಯಿ ಪಾಳು ಬಾವಿಯಲ್ಲಿ ಬಿದ್ದಿರುವಂತೆ ಕನಸು ಕಂಡಿತು. ಅವಳಿಗೆ ಬಹಳ ಆಶ್ಚರ್ಯವೆನಿಸಿತು.

ಸುಪ್ತಮನಸ್ಸು ಅಪಾರ ಶಕ್ತಿಯಿಂದ ಕೂಡಿರುತ್ತದೆ. ಎಲ್ಲ ಕಡೆಯೂ ಸಂಚರಿಸಬಲ್ಲ ಸುಪ್ತಮನಸ್ಸು ಭೂತ, ವರ್ತಮಾನ, ಭವಿಷ್ಯತ್ ಕಾಲಗಳ ಪ್ರಜ್ಞೆಯನ್ನೂ ಹೊಂದಿರುತ್ತದೆ. ಅವಳಿಗೆ ಎಲ್ಲೋ ಓದಿಕೊಂಡ ವಿಷಯದ ನೆನಪಾಯಿತು. ಇದ್ದರೂ ಇರಬಹುದೇನೋ. ಸುಪ್ತಮನಸ್ಸಿನ ಆಳ ಅಗಲವನ್ನು ಇದುವರೆಗೆ ಯಾರಿಗೂ ಅರಿತುಕೊಳ್ಳಲಾಗಿಲ್ಲವಲ್ಲ. ನಮ್ಮ ಸನಾತನರು, ಯೋಗಿಗಳು ತಮ್ಮ ಏಕಾಗ್ರತೆಯ ಮೂಲಕ, ಯೋಗಶಕ್ತಿಯ ಮೂಲಕ, ತಮ್ಮ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಸುಪ್ತಮನಸ್ಸಿನ ಪ್ರಯೋಜನವನ್ನು ಪಡೆಯುತ್ತಿರಬಹುದು. ಭಾರತದ ಹೆಮ್ಮೆಯ ಗಣಿತಜ್ಞ ರಾಮಾನುಜನ್‌ರಿಗೆ ಕನಸಿನಲ್ಲಿ ಕ್ಲಿಷ್ಟವಾದ ಗಣಿತದ ಸೂತ್ರಗಳು ಕಂಡು ಬರುತ್ತಿದ್ದವಂತೆ. ನಿದ್ರೆಯಿಂದ ಎಚ್ಚೆತ್ತು ಅವರು ಅದನ್ನೇ ಬರೆದಿಡುತ್ತಿದ್ದರಂತೆ. ಜರ್ಮನಿಯಲ್ಲಿ ಹುಟ್ಟಿದ ಅಸಾಮಾನ್ಯ ಸಂಗೀತ ಸಂಯೋಜಕ ಮತ್ತು ಪಿಯಾನೋ ವಾದಕ ಬೀಥೋವೆನ್‌ರಿಗೆ ಒಮ್ಮೆ ಕುದುರೆಗಾಡಿಯಲ್ಲಿ ಹೋಗುತ್ತಿರುವಾಗ ಒಂದು ಕನಸು ಬಿದ್ದಿತಂತೆ. ಮಧ್ಯ ಪ್ರಾಚ್ಯದ ದೇಶವೊಂದರಲ್ಲಿ, ಕುದುರೆಗಾಡಿಯಲ್ಲಿ ಹೋಗುತ್ತಿರುವಂತೆ, ಅಲ್ಲಿ ಒಂದು ಅಪೂರ್ವ ರಾಗ ಸಂಯೋಜನೆಯ ಝುಲಕೊಂದು ಮನಸ್ಸಿನಲ್ಲಿ ಮೂಡಿದಂತೆ....ಎಚ್ಚರವಾದಾಗ ಅವರು ಆ ರಾಗದ ಝುಲಕನ್ನೇ ಮರೆತಿದ್ದರಂತೆ. ಮತ್ತೆಂದೋ ನಿಜವಾಗಿಯೂ ಮಧ್ಯಪ್ರಾಚ್ಯದ ದೇಶವೊಂದರಲ್ಲಿ ಕುದುರೆಗಾಡಿಯಲ್ಲಿ ಹೋಗುವಾಗ ಸುತ್ತ ಕಾಣುವ ದೃಶ್ಯಗಳೆಲ್ಲಾ ಚಿರಪರಿಚಿತವೆನಿಸಿ ಮರೆತು ಹೋದ ಆ ರಾಗದ ಝುಲಕು ಮತ್ತೆ ನೆನಪಾಯಿತಂತೆ....!

ಹೀಗೆ ನಂಬಲಸಾಧ್ಯವಾದ ಪವಾಡವನ್ನು ಮಾಡುವ ಅದೇ ಸುಪ್ತಮನಸ್ಸು ತನ್ನ ತಾಯಿ ಕೋಟೆ ಬಂಗಲೆಯ ನೆಲಮಾಳಿಗೆಯಲ್ಲಿ ಬಂಧಿಯಾಗಿರುವುದನ್ನು ಅರಿತು ಪ್ರತಿಮೆಗಳ ರೂಪದಲ್ಲಿ ತನ್ನ ಅರಿವಿಗೆ ತರಲು ಪ್ರಯತ್ನಿಸಿರಬಹುದೇ?...ಅವಳಿಗೆ ಏನೊಂದೂ ಅರ್ಥವಾಗಲಿಲ್ಲ. ಪ್ರಕೃತಿಯಲ್ಲಿ ಬಹಳಷ್ಟು ರಹಸ್ಯಗಳಿವೆ. ಎಲ್ಲೋ ಅಲ್ಲೊಂದು ಇಲ್ಲೊಂದು ರಹಸ್ಯವು ಅನಾವರಣಗೊಳ್ಳುವುದು ಬಿಟ್ಟರೆ ಮತ್ತೆಲ್ಲಾ ನಿಗೂಢವೆನಿಸಿತು ಅವಳಿಗೆ.

ಮತ್ತೆ ಅವಳಿಗೆ ಸಮಾಧಾನವಾಗಿ ಮಲಗಿರಲು ಸಾಧ್ಯವಾಗಲಿಲ್ಲ. ಮೇಲೆದ್ದವಳಿಗೆ ರಮ್ಯಾಳ ನೆನಪಾಯಿತು. ಅವಳ ಜೊತೆಗೆ ಕೆರೆದಂಡೆಯಲ್ಲಿ ಕಳೆದರೆ ಮನಸ್ಸಿನ ಒತ್ತಡ ಸ್ವಲ್ಪವಾದರೂ ಕಡಿಮೆಯಾಗಬಹುದೇನೋ. ಯೋಚಿಸಿದವಳು ಅವಳಿಗೊಂದು ಕರೆ ಮಾಡಿದಳು. ರಮ್ಯಾಳಿಗೂ ಒಬ್ಬಳೇ ಇದ್ದು ಬೇಸರವಾಗಿರಬೇಕು. ಕೆರೆದಂಡೆಗೆ ಹೋಗಿ ಬರುವ ಪ್ರಸ್ತಾಪಕ್ಕೆ ತಕ್ಷಣ ಒಪ್ಪಿದಳು.

'ಆಯ್ತು ಋತು, ಇನ್ನು ಅರ್ಧ ಗಂಟೆಯೊಳಗೆ ಅಲ್ಲಿರ್ತೀನಿ...' ಎಂದಳು.

ಋತುವೂ ಮುಖ ತೊಳೆದುಕೊಂಡು ತೊಟ್ಟಿದ ಕುರ್ತಾವನ್ನು ಬದಲಾಯಿಸಿ ಸಿದ್ಧವಾಗುವಷ್ಟು ಹೊತ್ತಿಗೆ ರಮ್ಯಾಳೂ ಹಾಜರಿದ್ದಳು.

'ಚಿಕ್ಕಮ್ಮ....ಕೆರೆದಂಡೆವರೆಗೂ ಹೋಗಿ ಬರ್ತೀವಿ...' ಒಳಗೆ ಕೆಲಸದಲ್ಲಿದ್ದ ಚಿಕ್ಕಮ್ಮನಿಗೆ ಹೇಳಿದ ಶಾಸ್ತ್ರ ಮಾಡಿ ಆಕೆಯ ಪ್ರತಿಕ್ರಿಯೆಗೂ ಕಾಯದೆ ರಮ್ಯಾಳೊಂದಿಗೆ ಹೊರಬಂದಳು.

ಭರತ ಹೆಚ್ಚಾಗಿ ಕುಳಿತುಕೊಳ್ಳುತ್ತಿದ್ದ ಕಾರಂಜಿ ಉದ್ಯಾನವನದತ್ತ ನೋಡಿ ನಿಟ್ಟುಸಿರಿಟ್ಟಳು. ಅವನು ಸಾಮಾನ್ಯ ಮನುಷ್ಯನಾಗಿ ಹೊರಬಂದರೆ ಸಾಕೆನಿಸಿತು. ಇಬ್ಬರೂ ಕೆರೆದಂಡೆ ತಲುಪಿದರು. ಈ ದಿನ ಮೋಡದ ವಾತಾವರಣವಿರದೆ ಪರಿಸರ ಶುಭ್ರವಾಗಿತ್ತು. ಸಂಜೆಯ ಹೊಂಬಿಸಿಲು ಕೆರೆದಂಡೆಯನ್ನು ಬೆಚ್ಚಗಿಟ್ಟಿತ್ತು. ಭಾನುವಾರವಾದ್ದರಿಂದ ಪ್ರವಾಸಿಗರು ಅದರಲ್ಲೂ ಮಕ್ಕಳೂ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಕೆರೆಯಲ್ಲಿ ದೋಣಿ ವಿಹಾರ ಮಾಡುತ್ತಿರುವುದನ್ನು ನೋಡುವುದೇ ಸಂತೋಷವನ್ನು ಕೊಟ್ಟಿತ್ತು. ಇಷ್ಟು ಜನಜಂಗುಳಿ ಇದ್ದರೂ ಕೆರೆಯ ಮೂಲೆಯಲ್ಲಿ ಬಾತುಕೋಳಿಗಳು ಗುಂಪೊಂದು ತಮ್ಮ ಪಾಡಿಗೆ ತಾವು ಈಜಿಕೊಂಡಿದ್ದವು. ಇಬ್ಬರೂ ಕೆರೆಗೆ ಸಮೀಪದ ಕಲ್ಲುಬಂಡೆಯೊಂದನ್ನು ಒರಗಿಕೊಂಡು ಕುಳಿತರು. ಋತು ಎಂದಿನಂತಿಲ್ಲವೆನಿಸಿತು ರಮ್ಯಾಳಿಗೆ.

'ಋತು, ಯಾಕೋ ತುಂಬಾ ಡಲ್ಲಾಗಿದ್ದೀಯಲ್ಲ, ಏನಾಯ್ತೇ?'

'ಹಾಗೇನಿಲ್ಲ ಕಣೆ, ಬೆಳಗ್ಗಿನಿಂದ ಸಣ್ಣಗೆ ತಲೆನೋವು, ಜೊತೆಗೆ ನಂದಿಗೆ ಹೋಗಿ ಬಂದ್ಮೇಲೆ ತನ್ನ ತಾಯಿಯ ಬಗೆಗಿನ ವಿಚಾರಗಳನ್ನು ತಿಳಿದುಕೊಳ್ಳುವ ಜವಾಬ್ದಾರಿಯೂ ಈ ನನ್ನ ಮೇಲಿದ್ಯಲ್ಲ...' ಎಂದಳಷ್ಟೇ ಋತು.

'ಹೌದು ಋತು, ಎಲ್ಲಾ ಸರಿ ಹೋಗುತ್ತೆ, ಅಪ್ಪಾಜಿ ಹೇಳಿದಂತೆ ನಿನ್ನ ಆತ್ಮಶಕ್ತಿಯೇ ನಿನಗೊಂದು ದಾರಿ ತೋರಿಸುತ್ತೆ ನೋಡ್ತಿರು..' ರಮ್ಯಾಳೆಂದಳು.

ಆ ಆತ್ಮಶಕ್ತಿಯೇ ನನಗೊಂದು ದಾರಿಯನ್ನು ತೋರ್ಸಿಯಾಯ್ತು ರಮ್ಯ....ಎಂದುಕೊಂಡಳು ಋತು ಮನಸ್ಸಿನಲ್ಲೇ.

ಗಾಢ ನೀಲಿ ಬಣ್ಣದ ಚೂಡಿಯನ್ನು ಧರಿಸಿ ಕಳೆಕಳೆಯಾಗಿದ್ದ ಗೆಳತಿಯನ್ನು ನೋಡಿದಳು. ಎಷ್ಟೇ ವೈರಾಗ್ಯವೆಂದುಕೊಂಡರೂ ಯೋಗ್ಯ ಸಂಗಾತಿ ಸಿಕ್ಕಿದರೆ ಸಿಗುವ ಸಂತೋಷ ಅವರ್ಣನೀಯವೆನಿಸಿತು.

'ರಮ್ಯ....ಏನಂತಾರೆ ಅಜಯ್, ಅವರ ಸ್ವಭಾವ ನಿಂಗಿಷ್ಟವಾಗ್ತಿದ್ಯಾ?..' ನಗುತ್ತಾ ಕೇಳಿದಳು.

'ಹುಂ ಕಣೆ ಋತು, ಪ್ರತೀ ರಾತ್ರಿ ಮರೀದೇ ಕಾಲ್ ಮಾಡ್ತಾರೆ, ಬಿಡುವು ಮಾಡಿಕೊಂಡು ಆಗಾಗ ಬಂದು ಮಾತನಾಡಿಸ್ತಾರೆ, ಅವ್ರ ತಾಯಿ, ತಂದೆಗೂ ವಿಷಯ ತಿಳಿಸಿದ್ದಾರಂತೆ, ಸದ್ಯದಲ್ಲೇ ಅವ್ರು ನನ್ನ ನೋಡೋಕೆ ಇಲ್ಲಿಗೆ ಬರ್ತಾರಂತೆ..'

'ಅವೆಲ್ಲಾ ಇರ್ಲಿ, ಮುಖ್ಯವಾಗಿ ಅಪ್ಪಾಜಿಗೆ ತಿಳಿಸಿದ್ಯೇನೇ?'

'ಏನು ಋತು ನೀನು, ನಾನು ಮೊದ್ಲು ಮಾತನಾಡಿದ್ದೇ ಅಪ್ಪಾಜಿ ಜೊತೆಗೆ, ಅವ್ರು ಓಕೆ ಅಂದ್ಮೇಲೇ ನಂಗೆ ನಿಜವಾಗಿ ಧೈರ್ಯ ಬಂದಿದ್ದು. ಅವ್ರಿಗಂತೂ ತುಂಬಾ ಖುಷಿಯಾಗಿದೆ, ಈ ಖುಷಿಗೆ ಕಾರಣರಾದ ನಿನ್ನನ್ನೂ, ಹೇಮಂತನನ್ನೂ ತುಂಬಾ ನೆನಪಿಸಿಕೊಂಡ್ರು..' ಎಂದಳು ರಮ್ಯ.

ಕತ್ತಲಾಗುವವರೆಗೂ ಗೆಳತಿಯರು ಮಾತನಾಡುತ್ತಿದ್ದು ನಂತರ ಕೋಟೆ ಬಂಗಲೆಗೆ ಹಿಂದಿರುಗಿದರು. ತನ್ನ ಕೈನೆಟಿಕ್ಕಿನಲ್ಲಿ ರಮ್ಯಾಳನ್ನು ಪಿಜಿಯವರೆಗೆ ಬಿಟ್ಟು ಋತು ಹಿಂದಿರುಗಿದಳು.

ಆ ಸಂಜೆ ರಮ್ಯಾಳೊಂದಿಗೆ ಕಳೆದುದರಿಂದ ಅವಳ ಮನಸ್ಸು ನಿರಾಳವಾಗಿತ್ತು. ಇನ್ನೇನು ಇವತ್ತಿನ ರಾತ್ರಿಯೊಂದೇ. ಈ ದೀರ್ಘ ರಾತ್ರಿಯನ್ನು ಕಳೆದು ಬಿಟ್ಟರೆ ಬೆಳಗಿನ ಜಾವವೇ ಚಂದ್ರಪ್ಪ, ಸುಂದರಿಯರ ಬಂಧನವಾಗುತ್ತದೆ. ಆಗ ಎಲ್ಲ ರಹಸ್ಯಗಳೂ ಬಯಲಿಗೆ ಬರುತ್ತವೆ. ಮುಖ್ಯವಾಗಿ ತನ್ನ ತಾಯಿ ಬೆಳಕಿಗೆ ಬರುತ್ತಾಳೆ. ಡ್ರೈವರಿನ ಹಿಂದೆ ಓಡಿ ಹೋದವಳೆಂದು ಇಷ್ಟು ದಿನ ಅವಳಿಗಿದ್ದ ಕಳಂಕ ದೂರವಾಗುತ್ತದೆ. ಅವಳು ಮೊದಲಿನಂತಾದರೆ ಅದಕ್ಕಿಂತ ಸಂತೋಷದ ವಿಷಯ ಇನ್ಯಾವುದಿದೆ?

ಆ ರಾತ್ರಿ ಸಂತೋಷದಿಂದ ಉದ್ವೇಗದಿಂದ ಬಹಳ ಹೊತ್ತು ಋತುವಿಗೆ ನಿದ್ರೆ ಬರಲಿಲ್ಲ. ಯಾವಾಗಲೋ ಗಾಢವಾಗಿ ನಿದ್ರಿಸಿದ್ದಳು.

ಯಾವುದೋ ಒಂದು ಹೊತ್ತಿನಲ್ಲಿ ವ್ಯಕ್ತಿಯೊಂದು ತನ್ನ ಬಳಿ ಬಂದು ನಿಂತಂತಾದಾಗ ಋತುವಿಗೆ ಫಕ್ಕನೆ ಎಚ್ಚರವಾಯಿತು. ಆ ವ್ಯಕ್ತಿ ಕೂಡಲೇ ಬಾಗಿ ಕ್ಲೋರೋಫಾರಂ ಸಿಂಪಡಿಸಿದ ಕರವಸ್ತ್ರವನ್ನು ಅವಳ ಮೂಗಿಗೆ ಹಿಡಿದಾಗ ಅವಳು ಆ ಕ್ಷಣವೇ ಪ್ರಜ್ಞೆ ತಪ್ಪಿದ್ದಳು. ಋತುವಿಗೆ ಯಾವುದೋ ಒಂದು ಸಮಯದಲ್ಲಿ ಎಚ್ಚರವಾಯಿತು. ತಾನೆಲ್ಲಿದ್ದೇನೆಂದು ತಿಳಿಯಲಿಲ್ಲ. ಗವಾಕ್ಷಿಯಿಂದ ಕ್ಷೀಣವಾಗಿ ಸೂರ್ಯನ ಬೆಳಕು ತೂರಿ ಬರುತ್ತಿತ್ತು. ನಿಧಾನವಾಗಿ ಆ ಬೆಳಕಿಗೆ ತನ್ನ ಕಣ್ಣುಗಳನ್ನು ಒಗ್ಗಿಸಿಕೊಳ್ಳತೊಡಗಿದಳು. ಕಲ್ಲಿನ ಗೋಡೆ, ಕಲ್ಲಿನ ಛಾವಣಿಗಳು ಗೋಚರಿಸತೊಡಗಿದವು.

ಅಂದರೆ ತಾನಿರುವುದು ಕೋಟೆ ಬಂಗಲೆಯ ನೆಲಮಾಳಿಗೆಯಲ್ಲಿ...! ರಾತ್ರಿ ಯಾರೋ ತನ್ನ ಪಕ್ಕದಲ್ಲಿ ಬಂದು ನಿಂತಂತಾದಾಗ ತನಗೆ ಎಚ್ಚರವಾಗಿತ್ತು.